ಸಾಕ್ಷಿಯನ್ನು ದಿನಾಂಕಃ 22/02/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಎದುರುದಾರ ಪರ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೋರ್ಟ ಬೇಲಿಫ್ ಸಮನ್ಸ ಕೊಡಲು ಬಂದರು, ಅದನ್ನು ನೀವು ನಿರಾಕರಿಸಿದ್ದೀರಿ ಎಂದರೆ ಸರಿಯಲ್ಲ. ಸದರಿ ಬೇಲಿಫ್ ಗೆ ಸಮನ್ಸ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದರಿಂದ ಅವರು ಆ ರೀತಿ ವರದಿ ಹಾಕಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅಂಚೆ ಸ್ವೀಕೃತಿಪತ್ರ ತೋರಿಸಿ ಅದರೊಳಗೆ ಇರುವ ಅವರ ಸಹಿಯನ್ನು ತೋರಿಸಲಾಗಿ ಸಾಕ್ಷಿ ಅದು ನನ್ನ ಸಹಿ ಅಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಮತ್ತೊಂದು ಅಂಚೆ ಸ್ವೀಕೃತಿಪತ್ರ ತೋರಿಸಿ ಅದರೊಳಗೆ ಇರುವ ಅವರ ಸಹಿ ನಿಮ್ಮ ಹೆಂಡತಿಯದು ಎಂದರೆ ಸಾಕ್ಷಿ ಅವರು ಹೆಬ್ಬಟ್ಟು ಹಾಕುತ್ತಾರೆ, ಸಹಿ ಮಾಡುವುದಿಲ್ಲ ಎಂದು ಹೇಳುತ್ತಾರೆ. TI ಆದ ಮೇಲೆ ಕೋರ್ಟನಿಂದ ನೋಟಿಸು ಜಾರಿಯಾಗಿದೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ಕೋರ್ಟನಿಂದ ಸಮನ್ಸ ಜಾರಿಯಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ನರಗುಂದ ನ್ಯಾಯಾಲಯದಲ್ಲಿ ಅಮಲುಜಾರಿ ಅರ್ಜಿಯಲ್ಲಿ ಶ್ರೀ ಪಂಚಗರ ಹಿರೇಮಠ ರವರು ಪ್ರಕರಣ ದಾಖಲಿಸಿದ್ದರು. ನಿಮ್ಮ ಪರವಾಗಿ ಮತ್ತು ನಿಮ್ಮ ಸಹೋದರರ ಪರವಾಗಿ ಶ್ರೀ. ಬಿ ಎಮ್ ಶಿಳ್ಳಿನ ವಕೀಲರು ಹಾಜರಾಗಿದ್ದರು ಎಂದರೆ ಸರಿ. ಸದರಿ ಪ್ರಕರಣ ನಿಮ್ಮ ಪರವಾಗಿ ಆಗಿದೆ ಎಂದರೆ ಸರಿ. ಅಸಲು ದಾವಾ ನಂ.142/2020 ರಲ್ಲಿ ಜಡ್ಜಮೆಂಟ್ ಆದ ಮೇಲೆ ನೀವು ಮತ್ತು ನಿಮ್ಮ ಹೆಂಡತಿ ಸೇರಿ ಶ್ರೀ. ಬಿ ಎಮ್ ಶಿಳ್ಳಿನ ವಕೀಲರಿಗೆ ಭೇಟ್ಟಿಯಾಗಿದ್ದೀರಿ ಎಂದರೆ ಇಲ್ಲ ಎಂದು ಹೇಳುತ್ತಾರೆ. ಉದ್ದೇಶಪೂರ್ವಕವಾಗಿ ಸದರಿ ಪ್ರಕರಣದ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
22.02.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**